# ಕುಸ್ತಿಗೆ ಮೂರು ಪದಕ ಖಚಿತ

**ಜಪಾನಿನ ಟೋಕಿಯೊದಲ್ಲಿ ಜು.24ರಿಂದ ಆ.9ರವರೆಗೆ ಒಲಿಂಪಿಕ್ಸ್ ನಡೆಯಲಿದೆ. ಭಾರತದ ಕ್ರೀಡಾಪಟುಗಳು ಈ ಬಾರಿ ಎಷ್ಟು ಪದಕಗಳನ್ನು ಗೆಲ್ಲಬಹುದು ಎನ್ನುವ ಲೆಕ್ಕಾಚಾರ ಶುರುವಾಗಿದೆ. 2012ರ ಲಂಡನ್ ಒಲಿಂಪಿಕ್ಸ್ ಕುಸ್ತಿ 60 ಕೆ.ಜಿ. ಫ್ರೀಸ್ಟೈಲ್ ವಿಭಾಗದಲ್ಲಿ ಕಂಚಿನ ಪದಕ ಜಯಿಸಿದ್ದ ಯೋಗೇಶ್ವರ ದತ್ ಅವರನ್ನು 'ಸುಧಾ' ಮಾತನಾಡಿಸಿದೆ.**



ಒಲಿಂಪಿಯನ್ ಯೋಗೇಶ್ವರ ದತ್ ಸಂದರ್ಶನ

■ **ಪ್ರಮೋದ್**
ಚಿತ್ರ: ತಾಜುದ್ದೀನ್ ಆಜಾದ್

◆ **ಟೋಕಿಯೊ ಒಲಿಂಪಿಕ್ಸ್‌ನ ಕುಸ್ತಿ ಸ್ಪರ್ಧೆಯಲ್ಲಿ ಭಾರತ ಎಷ್ಟು ಪದಕಗಳನ್ನು ಗೆಲ್ಲಬಹುದು?**

ವಿನೇಶ ಪೋಗಟ್, ಭಜರಂಗ್ ಪೂನಿಯಾ, ರವಿಕುಮಾರ ದಹಿಯಾ ಮತ್ತು ದೀಪಕ್ ಪೂನಿಯಾ ಈಗಾಗಲೇ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಂಡಿದ್ದಾರೆ. ಒಲಿಂಪಿಕ್ಸ್ ಆರಂಭವಾಗುವ ಜುಲೈ ಒಳಗೆ ಇನ್ನೂ ಇಬ್ಬರು ಅರ್ಹತೆ ಗಳಿಸುವ ಭರವಸೆಯಿದೆ. 2008 ಮತ್ತು ಆ ಬಳಿಕ ನಡೆದ ಎಲ್ಲ ಒಲಿಂಪಿಕ್ಸ್‌ಗಳಲ್ಲಿ ಭಾರತ ನಿರಂತರವಾಗಿ ಪದಕಗಳನ್ನು ಗೆದ್ದುಕೊಂಡಿದೆ. 2012ರಲ್ಲಿ ಕುಸ್ತಿಯಲ್ಲಿ ಎರಡು ಪದಕಗಳು ಬಂದಿದ್ದು, ಈ ಬಾರಿ ನಮ್ಮ ಕುಸ್ತಿಪಟುಗಳು ಹಿಂದಿನ ಎಲ್ಲ ದಾಖಲೆಗಳನ್ನೂ ಮುರಿಯಲಿದ್ದಾರೆ. ಕನಿಷ್ಠ ಮೂರು ಪದಕಗಳಂತೂ ಬಂದೇ ಬರುತ್ತವೆ.

◆ **ಕುಸ್ತಿ ಹೊರತುಪಡಿಸಿ ಬೇರೆ ಕ್ರೀಡೆಗಳಿಂದಲೂ ಪದಕದ ನಿರೀಕ್ಷೆ ಮಾಡಬಹುದಾ?**

ಈ ಬಾರಿ ಭಾರತ ಎಂಟು ಪದಕಗಳನ್ನು ಗೆಲ್ಲುವ ಭರವಸೆಯಿದೆ. ಕುಸ್ತಿ ಜೊತೆಗೆ ಬ್ಯಾಡ್ಮಿಂಟನ್, ಬಾಕ್ಸಿಂಗ್ ಮತ್ತು ಶೂಟಿಂಗ್‌ನಲ್ಲಿ ಪದಕಗಳು ಬರುತ್ತವೆ.

◆ **ಗ್ರಾಮೀಣ ಪ್ರದೇಶದಲ್ಲಿ ಕುಸ್ತಿ ಪಟುಗಳು ಮಣ್ಣಿನ ಅಂಕಣದಲ್ಲಿ ಅಭ್ಯಾಸ ಮಾಡುತ್ತಾರೆ. ಆದರೆ, ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳನ್ನು ಮ್ಯಾಟ್ ಮೇಲೆ ಆಡಿಸಲಾಗುತ್ತಿದೆ. ಈ ಬದಲಾವಣೆಗೆ**